ದಿ**: 08-01-2025**ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ **ಸವಾಲು ಶ್ರೀ ಎಂ.ಎಂ.ಹೆಚ್ ವಕೀಲರಿಂದ :**

1ನೇ ಪ್ರತಿವಾದಿ ನನ್ನ ತಾಯಿ. ನಾನು 1984ರಲ್ಲಿ ಹುಟ್ಟಿರುತ್ತೇನೆ. ನಾನು 2011ರಲ್ಲಿ ವಿವಾಹವಾಗಿದ್ದೇನೆ. ನಾನು ಹುಟ್ಟಿದಾಗಿನಿಂದ ಮದುವೆಯಾಗುವವರೆಗೂ ದಾವಾ ಸ್ಥಳದಲ್ಲಿರುವ ಮನೆಯಲ್ಲಿ ತಂದೆ ತಾಯಿಯ ಜೊತೆ ವಾಸವಿದ್ದೆ ಮತ್ತು ಮದುವೆಯಾದ ನಂತರವು ಈಗ ಸಹ ಅದೇ ಮನೆಯಲ್ಲಿ ವಾಸವಿದ್ದೇನೆ. ನನಗೆ 2010ರ ನಂತರ ದಾವಾ ಆಸ್ತಿಯ ಬಗ್ಗೆ ವೈಯುಕ್ತಿಕ ಮಾಹಿತಿ ಇದೆ, ಅದರ ಪೂರ್ವದ ವಿಚಾರವನ್ನು ನನ್ನ ತಾಯಿ ಮತ್ತು ಅಜ್ಜಿಯಿಂದ ತಿಳಿದುಕೊಂಡಿದ್ದೇನೆ. ನಾನು ಟಿ.ಸಿ.ಹೆಚ್ ವ್ಯಾಸಂಗ ಮಾಡಿದ್ದೇನೆ. 2ನೇ ವಾದಿ 8ನೇ ತರಗತಿಯವರೆಗೆ ಹಾಗೂ 4ನೇ ಪ್ರತಿವಾದಿ 9ನೇ ತರಗತಿಯವರೆಗೆ, 5ನೇ ಪ್ರತಿವಾದಿ ಪಿ.ಯು.ಸಿಯವರೆಗೆ ಹಾಗೂ ಸುರೇಶ ಹತ್ತನೇ ತರಗತಿಯವರೆಗೆ ಕಲಿತ್ತಿದ್ದಾರೆ.

**2)** ನನ್ನ ತಾಯಿಯ ತಾಯಿಯ ಹೆಸರು ಮಂಜಿ ಪೂಜಾರ್ತಿ. ಆಕೆಯ ತಾಯಿಯ ಹೆಸರು ಮುತ್ತು ಪೂಜಾರ್ತಿ. ಆಕೆಯ ತಾಯಿಯ ಹೆಸರು ದಾರು. ಸದರಿ ದಾರು ಅವರಿಗೆ ಮೂರು ಜನ ಮಕ್ಕಳು ಅವರೆಂದರೆ ಮುತ್ತು, ಪೂಜಾರ್ತಿ ಪುಟ್ಟು ಪೂಜಾರಿ ಮತ್ತು ಕೋಟಿ ಪೂಜಾರಿ. ಸದರಿ ಪುಟ್ಟು ಪೂಜಾರಿಗೆ ನಾಲ್ಕು ಜನ ಮಕ್ಕಳು ಅವರುಗಳೆಂದರೆ ಪಾರ್ವತಿ, ಕರಿಯಮ್ಮ, ಸತ್ಯ ಮತ್ತು ಗುಲಾಬಿ. ಸದರಿ ಪುಟ್ಟ ಪೂಜಾರಿಯ ಹೆಂಡತಿಯ ಮನೆ ದಾವಾ ಸ್ಥಳದಿಂದ ಆರೆಂಟು ಕಿ.ಮೀ ದೂರದ ಕುಳಂಜೆ. ಕೋಟಿ ಪೂಜಾರಿಗೆ ನಾಲ್ಕು ಜನ ಮಕ್ಕಳು ಅವರುಗಳೆಂದರೆ ಬುಡ್ಡಿ, ಶೇಖರ, ಉದಯ ಮತ್ತು ವನಜಾ. ಕೋಟಿಯ ಹೆಂಡತಿ ಮನೆ ನನಗೆ ಗೊತ್ತಿಲ್ಲ. ಮುತ್ತುಗೆ ಮಂಜಿ ಮತ್ತು ಕೂಸು ಪೂಜಾರ್ತಿ ಇಬ್ಬರು ಮಕ್ಕಳು. ಕೂಸುವಿಗೆ ಬೇಬಿ, ಗುಲಾಬಿ, ದಿನೇಶ, ಸತ್ಯವತಿ ಹಾಗೂ ಸುಮತಿ ಐದು ಜನ ಮಕ್ಕಳು. ಈ ದಾವೆಯಲ್ಲಿ ಕೂಸು, ಪುಟ್ಟು, ಕೋಟಿ ಅವರ ಮಕ್ಕಳನ್ನು ಪಕ್ಷಗಾರರಾಗಿನ್ನಾಗಿ ಮಾಡಿಲ್ಲ ಎಂದರೆ ಸರಿ. ಕಾರಣ ಅಂದರೆ ಈ ದಾವಾ ಸ್ಥಳದಲ್ಲಿ ಪಾಲು ಇಲ್ಲ ಎಂದರೆ ಸಾಕ್ಷಿಯು ಅವರೆಲ್ಲಾ ಬೇರೆ ಬೇರೆ ಕಡೆ ವಾಸವಿದ್ದ ಕಾರಣ ಅವರಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಮುತ್ತು, ಕೋಟಿ ಮತ್ತು ಪುಟ್ಟು ನಡುವೆ ಭಾಗವಾಗಿಲ್ಲ. ಈ ದಾವಾ ಸ್ಥಳದಲ್ಲಿ ಸದರಿಯವರಿಗೆ ಪಾಲು ಇಲ್ಲದ ಕಾರಣ ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಅಳಿಯ ಸಂತಾನ ಕುಟುಂಬದ ಆಸ್ತಿಯಲ್ಲ ಎನ್ನುವ ಕಾರಣದಿಂದ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

**3)** ಪುಟ್ಟು ಪೂಜಾರಿಯನ್ನು ನಾನು ನೋಡಿದ್ದೇನೆ. ಸದರಿಯವರು 1987ರಲ್ಲಿ ತೀರಿಕೊಂಡಿದ್ದಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ನಂದಿ ಪೂಜಾರ್ತಿ ಎಂದು ಯಾರು ಇಲ್ಲ, ಅದು ಮಂಜಿ ಪೂಜಾರ್ತಿ ಆಗಬೇಕಿತ್ತು. ನಂದಿ ಪೂಜಾರ್ತಿ ಅವರು ಯಜಮಾನಿಕೆ ಮಾಡಿದ್ದು ಇಲ್ಲ ಎಂದರೆ ಸರಿ. ದಾವಾ ಸ್ಥಳಗಳನ್ನು 200 – 300 ವರ್ಷಗಳ ಹಿಂದೆ ದಾರು ಪೂಜಾರ್ತಿಗಿಂತ ಹಿಂದಿನವರು ಗೇಣಿಗೆ ತೆಗೆದುಕೊಂಡಿರುತ್ತಾರೆ, ಆದರೆ ಅವರ ಹೆಸರು ಗೊತ್ತಿಲ್ಲ. ನನ್ನ ತಾಯಿ ಮತ್ತು ಅಜ್ಜಿ ಹೇಳಿದ ಪ್ರಕಾರ 200 – 300 ವರ್ಷಗಳ ಹಿಂದೆ ದಾವಾ ಸ್ಥಳಗಳನ್ನು ಗೇಣಿ ಪಡೆದಿದ್ದಾರೆ ಎಂದು ತಿಳಿದಿದೆ, ಆ ಬಗ್ಗೆ ದಾಖಲೆ ಇಲ್ಲ.

**4)** ನನ್ನ ಮದುವೆಯಾಗುವ ಸಮಯದಲ್ಲಿ ನನ್ನ ಮಾವ ನಮ್ಮೊಂದಿಗೆ ವಾಸಮಾಡಿಕೊಂಡಿದ್ದರು. ನನ್ನ ಅಜ್ಜಿಯ ಮಾವ ಪುಟ್ಟ ಪೂಜಾರಿ ಸಹ ಅದೇ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ಪುಟ್ಟ ಪೂಜಾರಿ ಬದುಕಿರುವಾಗಲೇ ದಾವಾ ಸ್ಥಳದಲ್ಲಿರುವ ಮನೆ ಹುಲ್ಲಿನ ಮನೆಯಾಗಿದ್ದು ಅದನ್ನು ಹಂಚಿನ ಮನೆಯಾಗಿ ಪರಿವರ್ತಿಸಿದ್ದಾರೆ ಎಂದರೆ ಸರಿ. ನನ್ನ ಮಾವ 2ನೇ ಪ್ರತಿವಾದಿ ಕೃಷಿ ಉದ್ಯೋಗ ಮಾಡುತ್ತಾರೆ, ಅವರಿಗೆ ಬೇರೆ ಯಾವುದೇ ಉದ್ಯೋಗ ಇಲ್ಲ. ಸದರಿಯವರು ಸಣ್ಣಪುಟ್ಟ ಕಂಟ್ರಾಕ್ಟ್ ಉದ್ಯೋಗ ಮಾಡುತ್ತಾರೆ ಎಂದರೆ ಸರಿಯಲ್ಲ. ಸದರಿ ಉದ್ಯೋಗ ಮಾಡಿ ಬಂದ ಸಂಪಾದನೆಯಿಂದ ಹುಲ್ಲಿನ ಮನೆ ತೆಗೆದು ಹಂಚಿನ ಮನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಅಜ್ಜಿಯ ಮಾಹಿತಿಯ ಮೇರೆಗೆ ಮನೆಯನ್ನು ಕುಟುಂಬದ ಹಣದಿಂದ ಪರಿವರ್ತಿಸಿದ್ದಾರೆ ಎಂದು ಹೇಳುತ್ತಿದ್ದೇನೆ. ಕುಟುಂಬಕ್ಕೆ ಸಂಬಂಧಿಸಿದ ಹಣ ಮತ್ತು ನಿಧಿ ಎಂದು ಬ್ಯಾಂಕಿನಲ್ಲಿ ಇಲ್ಲ. ಮುತ್ತು, ಕೋಟಿ ಅವರದ್ದು ಕೃಷಿ ಕೂಲಿಗಳು ಎಂದರೆ ಸಾಕ್ಷಿಯು ಮನೆಯಲ್ಲೇ ಕೃಷಿ ಮಾಡುತ್ತಿದ್ದರು ಎನ್ನುತ್ತಾರೆ. ಮುತ್ತು 1966ರಲ್ಲಿ ತೀರಿಹೋಗಿದ್ದಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ, ತೀರಿಹೋಗುವಾಗ 55 -60 ವರ್ಷವಾಗಿತ್ತು ಎನ್ನುತ್ತಾರೆ. ಕೋಟಿ ಯಾವಾಗ ತೀರಿಹೋಗಿದ್ದಾರೆ ಎಂದರೆ ಸಾಕ್ಷಿಯು ಕಳೆದ 30 – 40 ವರ್ಷದ ಹಿಂದೆ ತೀರಿಹೋಗಿದ್ದಾರೆ ಎನ್ನುತ್ತಾರೆ. ಮುತ್ತು, ಕೋಟಿ ಹಾಗೂ ಪುಟ್ಟು ಕೃಷಿ ಉದ್ಯೋಗ ಮಾಡುತ್ತಿದ್ದರು ಎಂದು ನನ್ನ ತಾಯಿ ಮತ್ತು ಅಜ್ಜಿ ತಿಳಿಸಿರುತ್ತಾರೆ. ಪುಟ್ಟ ಪೂಜಾರಿ ಎನ್ನುವವರು ಇಲ್ಲಿಂದ ಕೂಲಿ ಕೆಲಸದವರನ್ನು ಕರೆದುಕೊಂಡು ಹೋಗಿ ಗಟ್ಟದಲ್ಲಿ ಶೇರಿಗಾರಿಕೆ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ.

**5)** ನನ್ನ ಮಾವ 2ನೇ ಪ್ರತಿವಾದಿ ಸಲ್ಲಿಸಿದ ಲಿಖಿತ ಹೇಳಿಕೆಯ ಬಗ್ಗೆ ತಿಳಿದುಕೊಂಡಿದ್ದೇನೆ. ಸದರಿ ಲಿಖಿತ ಹೇಳಿಕೆಯಲ್ಲಿ ಪುಟ್ಟ ಪೂಜಾರಿ ಎನ್ನುವವರು ಇಲ್ಲಿಂದ ಕೂಲಿ ಕೆಲಸದವರನ್ನು ಕರೆದುಕೊಂಡು ಹೋಗಿ ಗಟ್ಟದಲ್ಲಿ ಶೇರಿಗಾರಿಕೆ ಕೆಲಸ ಮಾಡುತ್ತಿದ್ದ ಬಗ್ಗೆ ನನ್ನ ತಾಯಿಯ ಬಳಿ ಕೇಳಿದ್ದೇನೆ ಅವರು ಇಲ್ಲ ಎಂದು ಹೇಳಿದ ಕಾರಣ ನಾನು ಈಗ ಇಲ್ಲ ಎನ್ನುತ್ತಿದ್ದೇನೆ. ಸದರಿ ದಾವಾ ಸ್ವತ್ತಿನ ಭೂಮಾಲೀಕರು ಯಾರು ಎಂದು ನೆನಪಿಲ್ಲ. ಸತ್ಯವತಿ ಶೆಡ್ತಿ ಎನ್ನುವವರು ಭೂಮಾಲೀಕರಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸತ್ಯವತಿ ಶೆಡ್ತಿಯ ಬಳಿ ಪುಟ್ಟ ಮೊದಲ ಬಾರಿಗೆ 1960 – 65 ರಲ್ಲಿ ದಾವಾ ಸ್ವತ್ತುಗಳನ್ನು ಗೇಣಿಗೆ ಪಡೆದಿದ್ದರು ಎಂದರೆ ಸಾಕ್ಷಿಯು ಅವರ ಪೂರ್ವಜರು ಪಡೆದಿದ್ದರು ಎನ್ನುತ್ತಾರೆ. ಪುಟ್ಟ ಪೂಜಾರಿ ಗೇಣಿ ಕೊಡಲು ಪ್ರಾರಂಭ ಮಾಡಿದ್ದು 1960 – 65ನೇ ಇಸವಿಯಿಂದ ಪಾವತಿಸುತ್ತಿರಬಹುದು. ಆತನ ಅಕ್ಕ ಮುತ್ತು ಮತ್ತು ಕೋಟಿಯ ಸಹಾಯದಿಂದ ಬೇಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಮುತ್ತು ಮತ್ತು ಪುಟ್ಟು ಪೂಜಾರಿ ಒಟ್ಟಿಗೆ ಸೇರಿ ವ್ಯವಸಾಯ ಮಾಡುತ್ತಿದ್ದರು ಎನ್ನುತ್ತಾರೆ.

**6)** ದಾವಾ ಸ್ವತ್ತುಗಳನ್ನು ಗೇಣಿ ಪಡೆದ ನಂತರ ಹಳೆಯ ಮನೆಯನ್ನು ನಿರ್ಮಿಸಿದ್ದಾರೆ ಎಂದರೆ ಸಾಕ್ಷಿಯು ಮೊದಲ ಕಟ್ಟಿದ್ದರು ಎನ್ನುತ್ತಾರೆ. ಕುಟುಂಬದ ಪರವಾಗಿ ಪುಟ್ಟ ಪೂಜಾರಿ ಗೇಣಿ ಅರ್ಜಿ ಸಲ್ಲಿಸಿದ್ದಾರೆ. ಸದರಿ ದಾಖಲೆಯಲ್ಲಿ ಕುಟುಂಬದ ಪರವಾಗಿ ಎಂದು ಒಕ್ಕಣೆ ಬರೆದಿದ್ದಾರೆ. ಭೂನ್ಯಾಯ ಮಂಡಳಿಯ ತೀರ್ಪಿನಲ್ಲಿ ಕುಟುಂಬದ ಪರವಾಗಿ ಪುಟ್ಟು ಪೂಜಾರಿಯ ಹೆಸರಿಗೆ ಆಗಿದೆ. ಕುಟುಂಬದ ಪರವಾಗಿ ಆಗಿದೆ ಎಂದು ಸದರಿ ತೀರ್ಪಿನಲ್ಲಿದೆ. ಗೇಣಿ ಅರ್ಜಿ ಮತ್ತು ಭೂನ್ಯಾಯ ಮಂಡಳಿಯ ತೀರ್ಪಿನಲ್ಲಿ ಕುಟುಂಬದ ಪರವಾಗಿ ಎಂದು ಇರುವುದರಿಂದ ನಾನು ಕುಟುಂಬ ಆಸ್ತಿ ಹೇಳುತ್ತಿದ್ದೇನೆ ಎಂದರೆ ಸರಿ.

**7)** ನಿ.ಪಿ - 29ನ್ನು ಓದಿ ನೋಡಿದ್ದೇನೆ. ಸದರಿ ನಿ.ಪಿ - 29ರಲ್ಲಿನ ಆಸ್ತಿಯನ್ನು ಪುಟ್ಟ ಮತ್ತು ಆತನ ಅಕ್ಕ ಮುತ್ತು ಒಂದೇ ಮನೆಯಲ್ಲಿ ವಾಸ್ತವ್ಯ ಇರುವಾಗ ಖರೀದಿಸಿದ್ದರು ಎಂದರೆ ಸರಿ. ಮುತ್ತು ಮಕ್ಕಳ ಪೈಕಿ ಮಂಜಿ ಮತ್ತು ಆಕೆಯ ಮಕ್ಕಳು ಅದೇ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ಒಂದೇ ಮನೆಯಲ್ಲಿ ವಾಸಮಾಡುತ್ತಿದ್ದ ಕಾರಣ ಚಾಲಾಗೇಣಿಯಲ್ಲಿ ಪಡೆದ ಆಸ್ತಿಗಳನ್ನು ಒಟ್ಟಿಗೆ ಬೇಸಾಯ ಮಾಡುತ್ತಿದ್ದರು ಎಂದು ನಿ.ಪಿ - 29ರಲ್ಲಿ ನಮೂದಿಸಲಾಗಿದೆ ಎಂದರೆ ಸರಿ.

**8)** ನನ್ನ ಮದುವೆ ವಿದ್ಯಾಭ್ಯಾಸಕ್ಕೆ ಖರ್ಚುಗಳನ್ನು ನನ್ನ ಮಾವ 2ನೇ ಪ್ರತಿವಾದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರು ಮತ್ತು ಅಜ್ಜಿ ಕುಟುಂಬದ ಉತ್ಪತ್ತಿಯಿಂದ ಮಾಡಿದ್ದಾರೆ ಎನ್ನುತ್ತಾರೆ. 1 ರಿಂದ 3ನೇ ಪ್ರತಿವಾದಿ ಮತ್ತು ನನ್ನ ಅಜ್ಜಿ ಪಾಲು ಮಾಡಿಕೊಂಡ ವಿಚಾರ ಇತ್ತಿಚಿಗೆ ಅಂದರೆ ವ್ಯಾಜ್ಯ ಮಾಡುವ ಸ್ವಲ್ಪ ಸಮಯದ ಮೊದಲು ತಿಳಿಯಿತು. ಸದರಿ ಪಾಲುಪಟ್ಟಿ ದಾಖಲೆಯ ನಕಲು ಪಡೆದಿರುತ್ತೇನೆ. ಸದರಿ ದಾಖಲೆ ದಿನಾಂಕ 22-02-2014ರಲ್ಲಿ ಆಗಿದೆ ಎಂದರೆ ಸರಿ. ಸದರಿ ದಾಖಲೆ ಈ ದಾವೆಯಲ್ಲಿ ಹಾಜರುಪಡಿಸಿರುವ ಬಗ್ಗೆ ನೆನಪಿಲ್ಲ. ಸದರಿ ದಾಖಲೆಗೆ ಒಂದು ಸಾಕ್ಷಿಯಾಗಿ ನನ್ನ ತಮ್ಮ 5ನೇ ಪ್ರತಿವಾದಿ ನಾಗರಾಜ ಪೂಜಾರಿ ಸಹಿ ಮಾಡಿದ್ದಾರೆ ಎಂದರೆ ಸರಿ. 5ನೇ ಪ್ರತಿವಾದಿ ಈಗ ನನ್ನ ಜೊತೆಯಲ್ಲಿ ನ್ಯಾಯಾಲಯಕ್ಕೆ ಬಂದಿದ್ದಾರೆ. ದಿನಾಂಕ 22-02-2014 ವಿಭಾಗ ಪತ್ರದ ಪ್ರಕಾರ ಸರ್ವೆ ನಂಬ್ರ 47/40ರಲ್ಲಿ 2.48 ಎಕರೆ ನನ್ನ ತಾಯಿಗೆ ವಿಂಗಡನೆ ಆಗಿದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಕೋರಿ ನನ್ನ ತಾಯಿ 2020ರಲ್ಲಿ ಅರ್ಜಿ ನೀಡಿದ್ದಾರೆ ಎಂದರೆ ಸರಿ. ಎಷ್ಟು ಸಾಮರ್ಥದ ಪಂಪ್ ಸೆಟ್ ಅಳವಡಿಸಿದ್ದಾರೆ ಎಂದು ಗೊತ್ತಿಲ್ಲ. ಸದರಿ ಸ್ಥಳದ ಆಧಾರದ ಮೇಲೆ ನನ್ನ ತಾಯಿ ಕರ್ನಾಟಕ ಬ್ಯಾಂಕಿನಲ್ಲಿ ಸಾಲ ತೆಗೆದ ಬಗ್ಗೆ ಗೊತ್ತಿಲ್ಲ. ನಿ.ಪಿ- 7ರಲ್ಲಿ ನನ್ನ ತಾಯಿ ವಿಜಯ ಬ್ಯಾಂಕ್ ಹಾಗೂ ಅಮಾವಾಸೆಬೈಲಿನ ವ್ಯವಸಾಯ ಸಹಕಾರ ಸಂಘದಲ್ಲಿ ಸಾಲ ಪಡೆದ ಬಗ್ಗೆ ಕಂಡುಬರುತ್ತದೆ. ನಿ.ಪಿ - 7ರಲ್ಲಿ ಕಂಡ ಸಾಲದ ಬಗ್ಗೆ ನನ್ನ ತಾಯಿಯ ಬಳಿ ಕೇಳಿದಾಗ 2ನೇ ಪ್ರತಿವಾದಿ ಮಾವನ ಮುಖಾಂತರ ಹೋಗಿ ಸಾಲ ಮಾಡಿರುವುದಾಗಿ ಎಂದು ತಿಳಿಸಿದ್ದಾರೆ.

**9)** ಸರ್ವೆ ನಂಬ್ರ 47/40 ಕ್ಕೆ ಕುಮ್ಕಿಯಾಗಿ ಲಗತ್ತಿರುವ ಸರ್ವೆ ನಂಬ್ರ 109 ರಲ್ಲಿ ಎರಡು ಎಕರೆ ಸ್ಥಳವನ್ನು ಮಂಜೂರು ಮಾಡುವಂತೆ ಅಕ್ರಮ ಸಕ್ರಮ ಸಮಿತಿಗೆ ಈಗ ನನಗೆ ತೋರಿಸಿದ ನಮೂನೆ 57ರಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಅರ್ಜಿಯನ್ನು **ನಿ.ಡಿ - 1** ಎಂದು ಗುರುತಿಸಲಾಯಿತು. ಅದೇ ಪ್ರಕಾರ 5ನೇ ಪ್ರತಿವಾದಿ ಸಹ ಅದೇ ಸರ್ವೆ ನಂಬ್ರ 109 ರಲ್ಲಿ ಮೂರು ಎಕರೆ ಸ್ಥಳವನ್ನು ಮಂಜೂರು ಮಾಡುವಂತೆ ಅಕ್ರಮ ಸಕ್ರಮ ಸಮಿತಿಗೆ ಈಗ ನನಗೆ ತೋರಿಸಿದ ನಮೂನೆ 57ರಲ್ಲಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮಂಜೂರು ಕೋರಿರುವ ಜಮೀನನ್ನು ಭಾಗ ಮಾಡುವಂತೆ ಕೇಳಿಲ್ಲ, ಆದರೆ ಮಂಜೂರಾದ ನಂತರ ವಿಭಾಗ ಮಾಡಲು ಆಕ್ಷೇಪವಿಲ್ಲ.

**10)** ನನ್ನ ತಾಯಿಗೆ 2014ರ ಪಾಲುಪಟ್ಟಿಯ ಪ್ರಕಾರ ವಿಭಾಗ ಮಾಡಿದ ಸ್ಥಳ ಬೇಸಾಯ ಸ್ಥಳ ಎಂದರೆ ಸರಿ. ಸದರಿ ಸ್ಥಳವನ್ನು ಬೇಸಾಯ ಮಾಡಲು ರತ್ನಕರ ಕುಲಾಲ್ ಗೆ ಗೇಣಿ ಮಾಡುವಂತೆ ನನ್ನ ತಾಯಿ ಬಿಟ್ಟುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಗೇಣಿಗೆ ಕೊಡಲಿಲ್ಲ, ಬೇಸಾಯ ಮಾಡಲು ಕೊಟ್ಟಿದ್ದಾರೆ ಎನ್ನುತ್ತಾರೆ. ನನ್ನ ತಾಯಿ ಗೇಣಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2014ರ ಪಾಲುಪಟ್ಟಿಯ ಪ್ರಕಾರ ಪಹಣಿ ಬದಲಾವಣೆಯಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ.

**11)** ಪುಟ್ಟ ಪೂಜಾರಿ ಮಾಡಿದ ವಿಲುನಾಮೆಯ ನಕಲನ್ನು ಪಡೆದಿಲ್ಲ. ವಿಲುನಾಮೆಯ ನಕಲನ್ನು ತೋರಿಸಿದ್ದಾರಾ ಎಂದರೆ ಸಾಕ್ಷಿಯು ವಿಲುನಾಮೆ ಮಾಡಿಲ್ಲ ಎನ್ನುತ್ತಾರೆ. ದಿನಾಂಕ 01-07-1987ರಂದು ಪುಟ್ಟ ಪೂಜಾರಿ ತೀರಿಕೊಂಡಿದ್ದಾರೆ ಎಂದರೆ ಸರಿ. ಪುಟ್ಟ ಪೂಜಾರಿ ದಾವಾ ಸ್ಥಳದ ಮನೆಯಲ್ಲಿ ತೀರಿಹೋಗಿದ್ದಾರೆ ಎಂದರೆ ಸರಿ. ಅವರು ವಯೋಸಹಜ ಕಾಯಿಲೆಯಿಂದ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಅವರು ಪಾರ್ಶ್ವವಾಯು ಕಾಯಿಲೆಯಿಂದ ಮರಣ ಹೊಂದಿದ್ದಾರೆ ಎನ್ನುತ್ತಾರೆ. ಸದರಿ ವಿಚಾರ ನನ್ನ ತಾಯಿ ಮತ್ತು ಅಜ್ಜಿ ತಿಳಿಸಿರುತ್ತಾರೆ. ಚಿಕಿತ್ಸೆ ಕೊಡಿಸಿದ ಬಗ್ಗೆ ಗೊತ್ತಿಲ್ಲ ಮತ್ತು ಆ ಬಗ್ಗೆ ದಾಖಲೆ ಇಲ್ಲ. ಪಾರ್ಶ್ವವಾಯುಯಿಂದ ಬಳಲುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**12)** ಪುಟ್ಟ ಪೂಜಾರಿ ದಿನಾಂಕ 02-02-1987ರಂದು ಸ್ವಇಚ್ಛೆಯಿಂದ ಮರಣ ಶಾಸನ ಬರೆದಿಟ್ಟಿದ್ದಾರೆ ಎಂದರೆ ಸುಳ್ಳು. ನನ್ನ ತಾಯಿ ವಿಲುನಾಮೆ ಮಾಡಿರುವ ವಿಚಾರ ನನಗೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಆಸ್ತಿಗಳನ್ನು ಪುನಃ ವಿಭಾಗ ಮಾಡಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲುನಾಮೆಯಲ್ಲಿ ವಿಂಗಡನೆಯಾದ ಪ್ರಕಾರ ಅವರವರೇ ಅನುಭವಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 02-02-1987ರ ವಿಲುನಾಮೆಯಲ್ಲಿ ಸಮಷ್ಟಿಯಾಗಿ ಇಟ್ಟಿದ್ದ ಆಸ್ತಿಯನ್ನು 2014ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ವಿಭಾಗ ಮಾಡಿಕೊಂಡಿದ್ದು ಗೊತ್ತಿಲ್ಲ ಎನ್ನುತ್ತಾರೆ. ಸದರಿ ಪಾಲುಪಟ್ಟಿಯಲ್ಲಿ ವಿಂಗಡಣೆಯಾದ ಆಸ್ತಿಯ ಮೇಲೆ ನಮ್ಮ ಮಾವ 2 ಮತ್ತು 3ನೇ ಪ್ರತಿವಾದಿ ಬ್ಯಾಂಕಿನಲ್ಲಿ ಸಾಲ ಮಾಡಿದ ವಿಚಾರ ನನಗೆ ತಿಳಿದಿಲ್ಲ.

**13)** ನನ್ನ ತಾಯಿಗೆ ವಿಂಗಡನೆ ಮಾಡಿದ ಆಸ್ತಿಯ ಉತ್ಪತ್ತಿ ನನಗೆ ಕೊಟ್ಟಿರುವುದಿಲ್ಲ. 2ನೇ ಪ್ರತಿವಾದಿಗೆ ವಿಂಗಡನೆಯಾದ ಆಸ್ತಿಯಲ್ಲಿ ಎಷ್ಟು ಉತ್ಪತ್ತಿ ಬರುತ್ತದೆ ಎಂದರೆ ಸಾಕ್ಷಿಯು ಪ್ರತ್ಯೇಕವಾಗಿ ಗೊತ್ತಿಲ್ಲ, ಒಟ್ಟಾಗಿ ಆಸ್ತಿಯ ಉತ್ಪತ್ತಿಯನ್ನು ಹೇಳಿದ್ದೇನೆ ಎನ್ನುತ್ತಾರೆ. 2ನೇ ಪ್ರತಿವಾದಿಯ ಹೆಂಡತಿಯ ಮನೆ ಹಾಲಾಡಿ. 2ನೇ ಪ್ರತಿವಾದಿ ಹೆಂಡತಿಯ ಮನೆಯಲ್ಲಿ 2010ರಿಂದ ವಾಸಮಾಡಿಕೊಂಡಿದ್ದಾರೆ. 2014ರಿಂದ ಸದರಿಯವರು ಅವರ ಹೆಂಡತಿಯ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ಅಕ್ರಮ ಸಕ್ರಮದಲ್ಲಿ ತೀರ್ಪಾದ ಸ್ಥಳವನ್ನು ನಾನು ನೋಡಿದ್ದೇನೆ. ಸದರಿ ಸ್ಥಳದಲ್ಲಿ ಅಡಿಕೆ ತೋಟವಿದೆ. ಸದರಿ ಜಾಗದ ವಿಸ್ತೀರ್ಣ ಗೊತ್ತಿಲ್ಲ. 2ನೇ ಪ್ರತಿವಾದಿಯೇ ಸದರಿ ಜಾಗವನ್ನು 30 ವರ್ಷದಿಂದ ಅತಿಕ್ರಮಿಸಿ ಆದಾಯ ಹೊಂದಿ ಮಂಜೂರು ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಾಗ ಕುಮ್ಕಿ ಸ್ಥಳವಾಗಿದೆ, ಆದರೆ ಯಾವ ಜಮೀನಿಗೆ ಎಂದು ಗೊತ್ತಿಲ್ಲ. 2ನೇ ಪ್ರತಿವಾದಿಗೆ ಸದರಿ ಜಾಗ ಮಂಜೂರು ಮಾಡದಂತೆ ನನ್ನ ತಾಯಿ ಮತ್ತು ಅಜ್ಜಿ ಆಕ್ಷೇಪಣೆ ಸಲ್ಲಿಸಿದ ಬಗ್ಗೆ ಗೊತ್ತಿಲ್ಲ. ಸದರಿ ಜಾಗವನ್ನು ಆತನ ಹೆಂಡತಿಯ ಅಕ್ಕನ ಮಗಳಿಗೆ ಮಾರಾಟ ಮಾಡಿದ್ದಾರೆ ಎಂದು ನಂತರ ತಿಳಿಯಿತು. ಸದರಿಯವರು ಸದರಿ ಜಾಗದಲ್ಲಿ ಕೃತ ಮಾಡಿಲ್ಲ. 2ನೇ ಪ್ರತಿವಾದಿಯ ಸ್ವಂತ ಜಾಗವಾಗಿರುವುದರಿಂದ 9ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಅದನ್ನು ಆಕ್ಷೇಪಿಸಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಅವರು 8ನೇ ಪ್ರತಿವಾದಿ ಅವರ ಹೆಂಡತಿಗೆ ದಾನ ಪತ್ರ ಬರೆದುಕೊಟ್ಟಿದ್ದನ್ನು ಪ್ರಶ್ನಿಸಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**14)** ನನ್ನ ಅಜ್ಜಿ ಮಂಜಿ ಪೂಜಾರ್ತಿ 2021ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. 2014ರ ಪಾಲುಪಟ್ಟಿಯಲ್ಲಿ ನನ್ನ ಅಜ್ಜಿ ಪಾಲಿಗೆ ಬಂದ ಆಸ್ತಿಗಳನ್ನು 1 ರಿಂದ 3ನೇ ಪ್ರತಿವಾದಿಗಳಿಗೆ ಮಾತ್ರ ವಿಭಾಗ ಮಾಡತಕ್ಕ ಆಸ್ತಿ, ಉಳಿದ ಪಕ್ಷಗಾರರಾಗಿ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಮ್ಮ ನಮ್ಮ ಮಾವನಿಗೆ ತೊಂದರೆ ಕೊಡುವ ಕಾರಣದಿಂದ ಈ ವ್ಯಾಜ್ಯ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಅಳಿಯ ಸಂತಾನ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ ನಮ್ಮ ಹಿರಿಯರು ಗೇಣಿಗೆ ಪಡೆದಿಲ್ಲ ಎಂದರೆ ಸರಿಯಲ್ಲ. ಪು ಟ್ಟ ಪೂಜಾರಿಯ ಹೆಬ್ಬೆಟ್ಟು ಹಾಕಿ ವಿಲುನಾಮೆಯನ್ನು ಫೋರ್ಜರಿ ಮಾಡಲಾಗಿದೆ ಎಂಬ ನಮ್ಮ ಸಾಧನೆ ಸುಳ್ಳು ಎಂದರೆ ಸರಿಯಲ್ಲ. ಭೂನ್ಯಾಯ ಮಂಡಳಿಯಿಂದ ಯಾವುದೇ

ಕುಟುಂಬದ ಪರವಾಗಿ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ಪುಟ್ಟ ಪೂಜಾರಿಗೆ ವೈಯುಕ್ತಿಕವಾಗಿ ಮಂಜೂರಾಗಿದೆ ಎಂದರೆ ಸರಿಯಲ್ಲ.

<u>ಪಾಟೀ **ಸವಾಲು 11ನೇ ಪ್ರತಿವಾದಿಯ ಪರ ಶ್ರೀ ಕೆ.ಸಿ.ಎಸ್ ವಕೀಲರಿಂದ**</u> **:**

**15)** ನಿ.ಪಿ - 13ರ ಪ್ರಕಾರ 25 ಮತ್ತು 26ನೇ ಐಟಂಗಳ ಸ್ವತ್ತು 2ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ಕಂಡುಬರುತ್ತದೆ ಎಂದರೆ ಸರಿ. ಅದೇ ರೀತಿ ನಿ.ಪಿ - 25 ಮತ್ತು 26ರಲ್ಲೂ ಸಹ 2ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ಕಂಡುಬರುತ್ತದೆ ಎಂದರೆ ಸರಿ. ಬ್ಯಾಂಕ್ ಆಫ್ ಬರೋಡಾದಲ್ಲಿ ಆ ಆಸ್ತಿಗಳ ಆಧಾರದ ಮೇಲೆ 2ನೇ ಪ್ರತಿವಾದಿ ಸಾಲ ಮಾಡಿದ್ದಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ**</u> ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**